ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪರಿಶೀಲನೆಯಲ್ಲಿದೆ.

ಆ) ಹಂತ ಹಂತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮದಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಮೇಲಿನ 'ಅ' ಮತ್ತು 'ಆ' ದಲ್ಲಿ ಈಗಾಗಲೇ ಉತ್ತರಿಸಲಾಗಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಹಂತಹಂತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗುವುದು ಎಂದು ಹೇಳಿದ್ದಾರೆ. ಹಂತಹಂತವಾಗಿ ಅಂದರೆ ಈಗಾಗಲೇ ಅಲ್ಲಿ ಕನ್‌ಸ್ಟ್ರಕ್ಷನ್, ಇನ್‌ಫ್ರಾಸ್ಟ್ರಕ್ಚರ್ ಇವೆಲ್ಲವೂ ಮುಗಿದಿದೆ. ಸರ್ಕಾರದ ಆದೇಶದ ಮೂಲಕ ಡಾಕ್ಟರ್ ಪೋಸ್ಟಿಂಗ್ ಮಾಡಿದರೆ ಆಯಿತು. ಉಳಿದಿರತಕ್ಕಂಥ ಹಾಸಿಗೆಗಳು ಅದನ್ನೆಲ್ಲ ನೀವು ಕೊಡಬೇಕಾಗುತ್ತದೆ, ಕಟ್ಟಡದ ಕೆಲಸವಂತೂ ಸಂಪೂರ್ಣವಾಗಿ ಮುಗಿದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಸೊರಬ ತಾಲ್ಲೂಕಿನಲ್ಲಿ 1991ರ ಜನಗಣತಿಯ ಪ್ರಕಾರ ಸುಮಾರು 1 ಲಕ್ಷ 52 ಸಾವಿರ ಜನರಿದ್ದಾರೆ. ಒಂದು ಲಕ್ಷಕ್ಕೆ ಒಂದರಂತೆ 30 ಹಾಸಿಗೆಗಳ ಸಮೂದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬೇಕಾಗುತ್ತದೆ. ಈಗಾಗಲೇ ಪ್ರತಿವರ್ಷ 8-10 ಸಮೂದಾಯ ಆರೋಗ್ಯ ಕೇಂದ್ರಗಳನ್ನು ಜಿಲ್ಲಾಪರಿಷತ್‌ನ ಪ್ರಸ್ತಾವನೆಯೊಳಗಡೆ ಮತ್ತು ಕೇಂದ್ರಸರ್ಕಾರದ ಮಾರ್ಗಸೂಚಿ ಪ್ರಕಾರ ಮಾಡಿತ್ತಿದ್ದೇವೆ. ಇದನ್ನೂ ಕೂಡ ಮಾಡಬೇಕೆಂಬ ಉದ್ದೇಶ ಸರ್ಕಾರದಲ್ಲಿದೆ. ಈ ವರ್ಷ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂದಿನ ವರ್ಷದಲ್ಲಿ ಸುಮಾರು ನಾಲ್ಕು ಪಿ.ಎಚ್.ಸಿ.ಗಳಿಗೆ ಒಂದು ಸಿ.ಎಚ್.ಸಿ. ಇರಬೇಕು, ಜನಸಂಖ್ಯೆ ಒಂದು ಲಕ್ಷ ಇರಬೇಕು ಎನ್ನತಕ್ಕಂಥದ್ದು. ಮಾರ್ಗಸೂಚಿ ಇದೆ. 1991ರ ಜನಗಣತಿ ಪ್ರಕಾರ 1,52,000 ಜನಸಂಖ್ಯೆ ಇರತಕ್ಕಂಥ ಸೊರಬ ಕ್ಷೇತ್ರಕ್ಕೆ ಈಗಾಗಲೇ 9 ಪಿ.ಎಚ್.ಸಿ.ಗಳು ಕೆಲಸ ಮಾಡುತ್ತಿವೆ ಈಗಾಗಲೇ ಒಂದು ಸಿ.ಎಚ್.ಸಿ. ಇದ್ದು ಮತ್ತೊಂದು ಸಿ.ಎಚ್.ಸಿ. ಕೊಡುವುದಕ್ಕೆ ಅವಕಾಶ ಇದೆ. ಮುಂದೆ ಪ್ರಸ್ತಾವನೆ ಬಂದಾಗ ಇದನ್ನು ಮಾಡುತ್ತೇವೆ.

ರಾಜ್ಯದಲ್ಲಿರುವ ಪ್ರೌಢಶಾಲೆಗಳು

416 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುದಾನಿತ ಶಾಲೆಗಳು ಸೇರಿದಂತೆ ಇರುವ ಒಟ್ಟು ಸರ್ಕಾರಿ ಪ್ರೌಢಶಾಲೆಗಳೆಷ್ಟು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 2281 ಸರ್ಕಾರಿ ಪ್ರೌಢ ಶಾಲೆಗಳು ಹಾಗೂ 2450 ಖಾಸಗಿ ಅನುದಾನಿತ ಪ್ರೌಢಶಾಲೆಗಳಿವೆ.

ಶ್ರೀ ಹೆಚ್. ಶಿವಪ್ಪ : ಅಧ್ಯಕ್ಷರೇ ಉತ್ತರ ಸರಿಯಾಗಿದೆ ಆದ್ದರಿಂದ ಸಪ್ಲಿಮೆಂಟರಿ ಪ್ರಶ್ನೆಗಳೇನು ಇಲ್ಲ.

ಜಯದೇವ ಹೃದ್ರೋಗ ಸಂಸ್ಥೆ ಕುರಿತು

417 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯದೇವ ಹೃದ್ರೋಗ ಸಂಸ್ಥೆಯ ಹೊಸ ಕಟ್ಟಡ ನಿರ್ಮಾಣ ಯಾವಾಗ ಪ್ರಾರಂಭವಾಯಿತು?

ಆ) ಈ ಕಟ್ಟಡ ನಿರ್ಮಾಣಕ್ಕಾಗಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?

ಇ) ಕಟ್ಟಡ ನಿರ್ಮಾಣ ಪೂರ್ಣಗೊಳ್ಳಲು ಬೇಕಾಗುವ ಹಣವೆಷ್ಟು?

ಈ) 1997-98ರಲ್ಲಿ ರಾಜ್ಯ ಸರ್ಕಾರ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಲಿರುವ ಒಟ್ಟು ಹಣವೆಷ್ಟು?

ಉ) ಕೇಂದ್ರ ಸರ್ಕಾರದಿಂದ ಕಟ್ಟಡ ನಿರ್ಮಾಣಕ್ಕಾಗಿ ಇದುವರೆಗೆ ಬಂದ ಹಣವೆಷ್ಟು?

ಊ) ಈ ಕಟ್ಟಡ ಯಾವಾಗ ಪೂರ್ಣಗೊಳ್ಳುವುದು?

ಋ) ಜಯದೇವ ಹೃದ್ರೋಗ ಸಂಸ್ಥೆಯನ್ನು ಯಾವಾಗ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು?

ಡಾ ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 11-07-1994

ಆ) ಇದುವರೆವಿಗೆ ರೂ. 15.30 ಕೋಟಿ ಖರ್ಚಾಗಿರುತ್ತದೆ.

ಇ) ಇನ್ನು ಅಂದಾಜು ರೂ.41.00 ಕೋಟಿ ಬೇಕಾಗಿರುತ್ತದೆ.

ಈ) 1997-98ನೇ ಸಾಲಿನ ಅಂದಾಜಿನಲ್ಲಿ ರೂ.1.00 ಕೋಟಿ ಹಣವನ್ನು ಒದಗಿಸಲಾಗಿದೆ. ಇದರಲ್ಲಿ ಇದುವರೆವಿಗೂ 1ನೇ ಮತ್ತು 2ನೇ ಕಂತಿನಲ್ಲಿ ರೂ.50 ಲಕ್ಷಗಳಷ್ಟು ಬಿಡುಗಡೆ ಮಾಡಲಾಗಿದೆ.

ಉ) ಇಲ್ಲ.

ಊ) ಜುಲೈ - ಸೆಪ್ಟೆಂಬರ್ 1998.

ಋ) ಸೆಪ್ಟೆಂಬರ್ 1998.